# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಜೂನ್, 2022** ಬೆಂಗಳೂರು, ಸಂಪುಟ 8, ಸಂಚಿಕೆ 2, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 June, 2022**, Bengaluru, Vol. 8, Issue No.2, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription :Annual Rs. 30; Life : Rs. 500/-
Published by: Karnataka Vipassana Prachara Samiti Trust.


## ಧಮ್ಮ ಪದಗಳು

| | |
|---|---|
| ಗಾರವೊ ಚ ನಿವಾತೊ ಚ,<br>ಸಂತುಟ್ಠಿ ಚ ಕತನ್ನೂತಾ ;<br>ಕಾಲೇನ ಧಮ್ಮಸ್ಸವಣಂ,<br>ಈತನ್ ಮಂಗಳ ಮುತ್ತಮಂ. | ಗೌರವಭಾವ, ನಮ್ರತೆ, ತೃಪ್ತಿ, ಉಪಕಾರ ಸ್ಮರಣೆ, ಸರಿಯಾದ ಸಮಯದಲ್ಲಿ ಧರ್ಮ ಪ್ರವಚನ ಕೇಳುವುದು – ಇದೇ ಗರಿಷ್ಠ ಅನುಗ್ರಹ. |

ಖುದ್ದಕ ಪಾಠ 5.9, ಮಂಗಳಸುತ್ತ

# ಬುದ್ಧರ ಜನ್ಮಭೂಮಿಯಲ್ಲಿ ಗೋಯಂಕಜಿ

(ಜುಲೈ 2005ರ ಇಂಗ್ಲಿಷ್‌ನ 'ವಿಪಶ್ಯನ ವಾರ್ತಾಪತ್ರ'ದಿಂದ ಅನುವಾದಿಸಲಾಗಿದೆ)

2001ರ ಬೇಸಿಗೆಯಲ್ಲಿ ಗೋಯಂಕಜಿ ಮತ್ತು ಮಾತಾಜಿಯವರು ನೇಪಾಳಕ್ಕೆ ಭೇಟಿಕೊಟ್ಟಿದ್ದರು. ಆ ನಂತರದಲ್ಲಿ ನೇಪಾಳದ ಧ್ಯಾನಾರ್ಥಿಗಳು ಗೋಯಂಕಜಿ ಮತ್ತು ಮಾತಾಜಿಯವರನ್ನು ಪದೇಪದೇ ನೇಪಾಳಕ್ಕೆ ಆಹ್ವಾನಿಸುತ್ತಿದ್ದರು. ಆದ್ದರಿಂದ 2005ರ ಮೇ ತಿಂಗಳಿನಲ್ಲಿ ಅವರು ನೇಪಾಳದ ವಿಪಶ್ಯನ ಧ್ಯಾನ ಕೇಂದ್ರವಾದ 'ಧರ್ಮಶೃಂಗ'ಕ್ಕೆ ಭೇಟಿ ನೀಡಲು ನಿರ್ಧರಿಸಿದರು.

2005ರ ಮೇ 9 ರಂದು ಗೋಯಂಕಜಿ ಮತ್ತು ಮಾತಾಜಿ ಮುಂಬಯಿಯಿಂದ ನೇಪಾಳಕ್ಕೆ ಪ್ರಯಾಣಿಸಿದರು. ಇದು ಮುಂಬಯಿಯ ದಗೆಯಿಂದ ಹಿಮಾಲಯದ ಶೀತ ಪ್ರದೇಶಕ್ಕೆ ತಕ್ಷಣದ ಸ್ಥಳಾಂತರವಾಗಿತ್ತು. ಗೋಯಂಕಜಿಯವರ ಆಗಮನವಾದ ಕೂಡಲೇ ಭೇಟಿ ಮಾಡುವವರು ಪ್ರವಾಹದೋಪಾದಿಯಲ್ಲಿ ಧ್ಯಾನಕೇಂದ್ರಕ್ಕೆ ಹರಿದುಬಂದರು. ಮಧ್ಯಾಹ್ನದ ವೇಳೆಯಲ್ಲಿ ಸಂದರ್ಶಕರನ್ನು ಭೇಟಿ ಮಾಡುತ್ತಿದ್ದರು ಮತ್ತು ಸಾಯಂಕಾಲಗಳನ್ನು ಬರೆಯುವುದಕ್ಕೆ ಮತ್ತು ಕಾಗದಪತ್ರಗಳ ಕೆಲಸಕ್ಕೆ ಮೀಸಲಿಡುತ್ತಿದ್ದರು.

ಮೇ 15 ರಂದು, ನೇಪಾಳದ ರಾಜ ಜ್ಞಾನೇಂದ್ರರವರು ಗೋಯಂಕಜಿಯವರನ್ನು ಭೇಟಿ ಮಾಡಲು ನೇಪಾಳ ವಿಪಶ್ಯನ ಕೇಂದ್ರಕ್ಕೆ ಬಂದರು. ಸುಮಾರು ಒಂದು ಗಂಟೆಯ ಕಾಲ ಅವರಿಬ್ಬರೂ ಜೊತೆಗಿದ್ದರು. ನಂತರ ರಾಜರಿಗೆ ಧ್ಯಾನ ಕೇಂದ್ರವನ್ನು ತೋರಿಸಲಾಯಿತು.

ಇತರ ಅನೇಕ ಸಂದರ್ಶಕರೂ, ಬಹುತೇಕ ಧ್ಯಾನ ಸಾಧಕರು, ಧ್ಯಾನಕೇಂದ್ರಕ್ಕೆ ಬಂದರು. ಧ್ಯಾನದ ಅಭ್ಯಾಸ ಮತ್ತು ಧರ್ಮದ ಸೈದ್ಧಾಂತಿಕ ವಿಷಯಗಳಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳು ಅವರಲ್ಲಿದ್ದವು. ಅವರ ಎಲ್ಲಾ ಪ್ರಶ್ನೆಗಳಿಗೂ ಗೋಯಂಕಜಿಯವರು ಉತ್ತರಿಸಿದರು. ಸ್ವಾಭಾವಿಕವಾಗಿಯೇ ಅವರೆಲ್ಲ ನೇಪಾಳದ ಸ್ಥಿತಿಗತಿಗಳ ಬಗ್ಗೆ ಚಿಂತಿತರಾಗಿದ್ದರು. ಬಹುಬೇಗ ನೇಪಾಳದಲ್ಲಿ ಶಾಂತಿ ನೆಲೆಸುವ ಆಶಾಭಾವನೆಯನ್ನು ಅವರು ವ್ಯಕ್ತಪಡಿಸಿದರು. "ನೀವೆಲ್ಲರೂ ನಿಮ್ಮ ಮಾನಸಿಕ ಆರೋಗ್ಯದ ಕಡೆ ಗಮನಕೊಡಿ, ಧರ್ಮವು ಪ್ರತಿಯೊಬ್ಬರಿಗೂ ಇದೆ–ಎಲ್ಲಾ ಸಮುದಾಯಗಳಿಗೆ, ಎಲ್ಲಾ ಜನಾಂಗದವರಿಗೆ, ಭಿನ್ನ ತತ್ತ್ವ ಸಿದ್ಧಾಂತಗಳಲ್ಲಿ ನಂಬಿಕೆಯಿರುವವರಿಗೆ ಅಥವಾ ಭಿನ್ನ ಸಾಮಾಜಿಕ–ರಾಜಕೀಯ ಅಭಿಪ್ರಾಯ ಹೊಂದಿರುವವರಿಗೆ. ಪರಿಶುದ್ಧ ಧರ್ಮವು ಯಾವಾಗಲೂ ಜನರನ್ನು ಒಟ್ಟುಗೂಡಿಸುತ್ತದೆ. ಪ್ರತಿಯೊಬ್ಬರೂ ಆಂತರಿಕ ಮತ್ತು ಬಾಹ್ಯ ಶಾಂತಿಗಾಗಿ ಕೆಲಸಮಾಡಿ" ಎಂದು ಗೋಯಂಕಜಿ ಸಲಹೆ ನೀಡಿದರು.

ಧಮ್ಮವನ್ನು ಹರಡುವ ಕೆಲಸದಲ್ಲಿ ತೊಡಗಿಸಿಕೊಂಡಿರುವವರು ರಾಜಕೀಯ ಚಟುವಟಿಕೆಗಳಿಂದ ದೂರವಿರಿ ಎಂದೂ ಅವರು ಒತ್ತಿ ಹೇಳಿದರು.

ಗೋಯಂಕಜಿಯವರು ಕೇಂದ್ರಕ್ಕೆ ಭೇಟಿಯಿತ್ತಾಗ ಹತ್ತು ದಿನಗಳ ಶಿಬಿರದಲ್ಲಿರುವ ವಿದ್ಯಾರ್ಥಿಗಳನ್ನು ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ. ಆದಾಗ್ಯೂ, ಅದು ವಿಶೇಷ ಶಿಬಿರವಾಗಿ ಪರಿವರ್ತನೆಯಾಯಿತು. ಏಕೆಂದರೆ ಹತ್ತನೆಯ ದಿನ ಮೈತ್ರಿ ಧ್ಯಾನವನ್ನು (ಮೆತ್ತಾ–ಭಾವನಾ) ಸ್ವತಃ ಗೋಯಂಕಜಿಯವರೇ ಶಿಬಿರಾರ್ಥಿಗಳಿಗೆ ಬೋಧಿಸಿದರು.

ಗೋಯಂಕಜಿಯವರ ಸಾಮರಸ್ಯದ ಸಂದೇಶವು ಹೆಚ್ಚು ಹೆಚ್ಚು ಜನರಿಗೆ ತಲುಪಬೇಕು. ಆದ್ದರಿಂದ ಗೋಯಂಕಜಿಯವರು ಕಠ್ಮಂಡು ನಗರದಲ್ಲಿ ಸಾರ್ವಜನಿಕ ಭಾಷಣ ಮಾಡಬೇಕೆಂದು ಅನೇಕರು ಅಪೇಕ್ಷಿಸಿದರು. ಅವರ ಆರೋಗ್ಯ ಮತ್ತು ವಯಸ್ಸಿನ ಕಾರಣದಿಂದ ಸಿಟಿಗೆ ಹೋಗಿ ವಾಪಾಸು ಬರುವುದು ಅವರಿಗೆ ಬಹಳ ಕಷ್ಟವಾಗುತ್ತಿತ್ತು. ಆದ್ದರಿಂದ ಮೇ 21ರ ಬೆಳಿಗ್ಗೆ ವಿಪಶ್ಯನ ಧ್ಯಾನ ಕೇಂದ್ರದಲ್ಲಿಯೇ ಭಾಷಣದ ವ್ಯವಸ್ಥೆ ಮಾಡಲಾಯಿತು. ಧ್ಯಾನಕೇಂದ್ರವು ಕಣಿವೆ ಪ್ರದೇಶದಲ್ಲಿದ್ದುದರಿಂದ ಬರುವ ಶ್ರೋತೃಗಳನ್ನು ಒಂದೇ ಕಡೆ ಕೂರಿಸಲು ಸಾಕಾಗುವಷ್ಟು ಸಮತಟ್ಟಾದ ಸ್ಥಳವಿರಲಿಲ್ಲ. ಶ್ರೋತೃಗಳ ಸಂಖ್ಯೆ ಬಹಳ ದೊಡ್ಡದಿದ್ದು ಕೇಂದ್ರದಲ್ಲಿನ ಕಟ್ಟಡದ ಮೆಟ್ಟಿಲುಗಳು, ತಾರಸಿ, ಬಾಲ್ಕನಿಯೂ ಸೇರಿ ಲಭ್ಯವಿರುವ ಎಲ್ಲಾ ಸ್ಥಳವನ್ನೂ ಆವರಿಸಿಕೊಂಡಿತ್ತು. ಗೋಯಂಕಜಿಯವರು "ವಿಪಶ್ಯನ ಮತ್ತು ಮಾನಸಿಕ ಶಾಂತಿ" ಎಂಬ ವಿಷಯದ ಮೇಲೆ ಮಾತಾಡಿದರು. ಅವರ ಪ್ರವಚನವನ್ನು 'ಇಮೇಜ್' ಟಿ.ವಿ. ವಾಹಿನಿಯವರು ನೇರ ಪ್ರಸಾರ ಮಾಡಿದರು.

ನೇಪಾಳವು ಬಹಳ ಅದೃಷ್ಟ ಮಾಡಿದೆ; ಏಕೆಂದರೆ ಚಾರಿತ್ರಿಕ ಬುದ್ಧರು ಇಲ್ಲಿ ಹುಟ್ಟಿದ್ದರು. ಮೊದಲಿನ ಇಬ್ಬರು ಬುದ್ಧರೂ ಇಲ್ಲಿ ಜನಿಸಿದ್ದರು ಎಂದು ಗೋಯಂಕಜಿ ಹೇಳಿದರು. ಈ ದೇಶವು ಬುದ್ಧರ ಬೋಧನೆಯ ಪುರಾತನ ಸಂಪತ್ತಿನಿಂದ ಅನುಗ್ರಹಿಸಲ್ಪಟ್ಟಿದೆ. ಬುದ್ಧರು ಯಾವಾಗಲು

ಸಾರ್ವತ್ರಿಕ ಧರ್ಮವನ್ನು ಅಂದರೆ ಪ್ರತಿಯೊಬ್ಬರಿಗೂ ಅನ್ವಯವಾಗುವ ನಿಯಮವನ್ನು ಬೋಧಿಸುತ್ತಾರೆ. ಬುದ್ಧರ ಮೂಲ ಬೋಧನೆಯು ಪುನಃ ನೇಪಾಳದಲ್ಲಿ ಹರಡಿದರೆ, ಅದು ದೇಶದಲ್ಲಿ ಶಾಂತಿಯುತ ವಾತಾವರಣವನ್ನು ನಿರ್ಮಿಸಲು ಸಹಾಯಮಾಡುತ್ತದೆ.

ನಗರದ ಅನೇಕ ಧ್ಯಾನ ಸಾಧಕರು ಗೋಯಂಕಜಿಯವರ ಉಪಸ್ಥಿತಿಯಲ್ಲಿ ಧ್ಯಾನ ಮಾಡಲು ಬಹಳ ಉತ್ಸುಕರಾಗಿದ್ದರು. ಆದ್ದರಿಂದ ಬುದ್ಧ ಪೂರ್ಣಿಮೆಯ ದಿನ (ಬುದ್ಧರು ಜನಿಸಿದ, ಜ್ಞಾನೋದಯ ಪಡೆದ ಮತ್ತು ಮಹಾಪರಿನಿರ್ವಾಣ ಹೊಂದಿದ ಹುಣ್ಣಿಮೆ.) ಒಂದು ದಿನದ ಶಿಬಿರವನ್ನು ವ್ಯವಸ್ಥೆ ಮಾಡಲಾಯಿತು. ಈ ಶಿಬಿರಕ್ಕೆ ಬರುವವರ ಸಂಖ್ಯೆ ಎಷ್ಟು ದೊಡ್ಡದಿತ್ತೆಂದರೆ, ಶಿಬಿರ ಸಂಯೋಜಕರು ನೋಂದಣಿ ಮಾಡಿಕೊಳ್ಳುವುದನ್ನೇ ನಿಲ್ಲಿಸಿದರು. ಒಂದು ಸಾವಿರಕ್ಕಿಂತ ಹೆಚ್ಚು ಜನರು ಈ ಒಂದು ದಿನದ ಶಿಬಿರದಲ್ಲಿ ಭಾಗವಹಿಸಲು ಬಂದರು. ಮುಂಜಾನೆ 7.30ರ ಸುಮಾರಿಗೆ ಕೇಂದ್ರವನ್ನು ತಲುಪಲು ಒಂದು ಘಂಟೆಯ ಪ್ರಯಾಣ ಮಾಡಿದ್ದರು. ಒಂದು ದಿನದ ಶಿಬಿರವು ಬೆಳಿಗ್ಗೆ 8 ಗಂಟೆಗೆ ಪ್ರಾರಂಭವಾಯಿತು. ಪ್ರತಿಯೊಂದು ಧ್ಯಾನ ಮಂದಿರ, ಖಾಲಿ ರೂಮುಗಳು ಮತ್ತು ಎಲ್ಲಾ ಧ್ಯಾನ ಕೋಶಗಳೂ (ಶೂನ್ಯಾಗಾರ) ತುಂಬಿದ್ದವು. ಶ್ರಮಜೀವಿ ಧಮ್ಮ ಸೇವಕರು ಮತ್ತು ದಕ್ಷ ವ್ಯವಸ್ಥಾಪಕರು ಎಲ್ಲರಿಗೂ ಸರಿಯಾಗಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡಿದ್ದರು ಮತ್ತು ತಾತ್ಕಾಲಿಕ ಊಟದ ಹಾಲ್‌ಗಳು ಸರಾಗವಾಗಿ ಕೆಲಸ ನಿರ್ವಹಿಸಿದವು. ಸಾಯಂಕಾಲ 4.30ರ ಮೆತ್ತಾ ಅಧಿವೇಶನವನ್ನು ಗೋಯಂಕಜಿ ನಡೆಸಿಕೊಟ್ಟರು. ಇದಕ್ಕಾಗಿ ಎಲ್ಲಾ ಧ್ಯಾನ ಸಾಧಕರು ಹೊರಬಂದು ಗೋಯಂಕಜಿಯವರನ್ನು ನೋಡುವ ಮತ್ತು ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಅನುಕೂಲವಾಗುವಂತಹ ಲಭ್ಯವಿದ್ದ ಎಲ್ಲಾಸ್ಥಳಗಳಲ್ಲಿ ಕುಳಿತಿದ್ದರು.

ಆರ್ಯ ಮೌನ ಪಾಲಿಸುತ್ತಾ ಬಹಳ ಗಂಭೀರವಾಗಿ ಧ್ಯಾನ ಮಾಡಿದ ವಿಪಶ್ಯನ ಧ್ಯಾನ ಸಾಧಕರ ಇಂತಹ ದೊಡ್ಡ ಸಮೂಹವನ್ನು ನೋಡಿ ಗೋಯಂಕಜಿ ಬಹಳ ಆನಂದಪಟ್ಟರು. ಅವರು ಹೇಳಿದರು :

**ಸುಖೋ, ಬುದ್ಧಾನಂ, ಉಪ್ಪಾದೊ**

ಬುದ್ಧರ ಆಗಮನ ಬಹಳ ಸುಖದಾಯಕ

**ಸುಖಾ, ಸದ್ಧಮ್ಮದೇ, ಸನಾ**

ಶುದ್ಧ ಧಮ್ಮ ಬೋಧನೆ ಸುಖದಾಯಕ

**ಸುಖಾ, ಸಂಘಸ್ಸ, ಸಾಮಗ್ಗೀ**

ಧ್ಯಾನಾರ್ಥಿಗಳು ಒಟ್ಟುಗೂಡುವುದು ಸುಖದಾಯಕ

**ಸಮಗ್ಗಾನಂ, ತಪೋ, ಸುಖೋ**

ಕೂಡಿ ಧ್ಯಾನ ಮಾಡುವುದು ಸುಖದಾಯಕ.

ಸರಿಯಾಗಿ ಗೌರವ ಕೊಡುವ ರೀತಿಯನ್ನು ಬುದ್ಧರು ಹೇಗೆ ಬೋಧಿಸಿದರು ಎಂಬುದನ್ನು ಬುದ್ಧರ ಜೀವನದ ಘಟನೆಗಳನ್ನು ಉದಾಹರಿಸಿ ಗೋಯಂಕಜಿಯವರು ವಿವರಿಸಿದರು. ತನ್ನ ತಾಯಿ ತೀರಿಕೊಂಡಾಗ ತನ್ನನ್ನು ಸಾಕಿದ ತನ್ನ ಚಿಕ್ಕಮ್ಮ ಪ್ರಜಾಪತಿ ಗೌತಮಿಯು ಒಮ್ಮೆ ಬುದ್ಧರಿಗೆ ಗೌರವ ಸೂಚಿಸಲು ಬಂದಾಗ, ಹತ್ತಿರದಲ್ಲಿ ಧ್ಯಾನ ಮಾಡುತ್ತಿದ್ದ ಭಿಕ್ಕುಗಳನ್ನು ತೋರಿಸಿ, ಬುದ್ಧರನ್ನು ಗೌರವಿಸುವ ಸರಿಯಾದ ರೀತಿ ಇದೇ ಎಂದು ಹೇಳಿದರು.

ಪುನಃ ಅವರು ಮಹಾಪರಿನಿರ್ವಾಣ ಹೊಂದುವ ಮೊದಲು, ಗಂಭೀರವಾಗಿ ಧ್ಯಾನ ಮಾಡುತ್ತಿದ್ದ ಇಬ್ಬರು ಭಿಕ್ಕುಗಳನ್ನು ತೋರಿಸಿ ನಿಜವಾದ ಅರ್ಥದಲ್ಲಿ ನನಗೆ ಗೌರವ ತೋರಿಸುವ ರೀತಿ ಇದೇ ಎಂದು ಹೇಳಿದರು.

ಮೇ 24 ರಂದು ಗೋಯಂಕಜಿಯವರು ವಿಪಶ್ಯನ ಆಚಾರ್ಯರುಗಳನ್ನು, ಸಹಾಯಕ ಆಚಾರ್ಯರುಗಳನ್ನು ಮತ್ತು ಟ್ರಸ್ಟಿಗಳನ್ನು ಭೇಟಿ ಮಾಡಿದರು. ಧ್ಯಾನ ಕೇಂದ್ರದ 'ನಿರ್ವಹಣಾ ಸಮಿತಿಗಳು' ವಾಸ್ತವವಾಗಿ 'ಸೇವಾ ಸಮಿತಿಗಳು'. ನಾನು ಅವುಗಳನ್ನು ಹೀಗೆಯೇ ಕರೆಯಲಿಚ್ಛಿಸುತ್ತೇನೆ ಎಂದು ಹೇಳಿದರು. ಧ್ಯಾನ ಕೇಂದ್ರದ ಪ್ರತಿಯೊಬ್ಬ ಧಮ್ಮ ಸೇವಕರೂ ಎಲ್ಲಾ ದಾನಗಳಿಗೂ ಶ್ರೇಷ್ಠವಾದ ಧಮ್ಮ ದಾನದ ಪುಣ್ಯಗಳನ್ನು ಗಳಿಸಿಕೊಳ್ಳುತ್ತಾರೆ ಎಂದು ಪುನಃ ಒತ್ತಿ ಹೇಳಿದರು.

ಸಮಾಜದಲ್ಲಿರುವ ವಿವಿಧ ಸಮಸ್ಯೆಗಳಿಗೆ ವಿಪಶ್ಯನ ಏನನ್ನು ಮಾಡಬಹುದು ಎಂಬ ಪ್ರಶ್ನೆಗೆ, ಗೋಯಂಕಜಿಯವರು, ಯಾರು ವಿಪಶ್ಯನವನ್ನು ಕಲಿತು ಅಭ್ಯಾಸ ಮಾಡುತ್ತಿದ್ದಾರೋ ಅವರಿಗೆ ಅದು ನೇರವಾಗಿ ಪ್ರಯೋಜನ ನೀಡುವುದಲ್ಲದೆ, ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಮತ್ತು ಯೋಗ್ಯ ಸಾಮಾಜಿಕ ಕಳಕಳಿ ಹೊಂದಿರುವ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ವಿಪಶ್ಯನವು ಬಲ ನೀಡುತ್ತದೆ ಎಂದು ಉತ್ತರಿಸಿದರು.

ಸಹಾಯಕ ಆಚಾರ್ಯರುಗಳು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ, ಗೋಯಂಕಜಿಯವರು, ಧರ್ಮ ಮಾರ್ಗದಲ್ಲಿ ನಿಮ್ಮ ಸ್ವಂತ ಅಭಿವೃದ್ಧಿಗಾಗಿ ಮತ್ತು ನಿಮ್ಮ ಕರ್ತವ್ಯವನ್ನು ನಿರ್ವಹಿಸುವಾಗ 'ಪರಿಯತ್ತಿ'ಯ(ಧರ್ಮದ ಸೈದ್ಧಾಂತಿಕ ಭಾಗ) ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು. ಆದರೆ ಇದು 'ಪಟಿಪತ್ತಿ' (ಧರ್ಮದ ಪ್ರಾಯೋಗಿ ಭಾಗ) ಸಂಪ್ರದಾಯವಾಗಿರುವುದರಿಂದ, 'ಪಟಿಪತ್ತಿ'ಯನ್ನು (ವಿಪಶ್ಯನ ಧ್ಯಾನವನ್ನು) ಹರಡುವುದಕ್ಕೆ, ನೀವು ಹೆಚ್ಚು ಪ್ರಾಮುಖ್ಯತೆ ಕೊಡಿ ಎಂದು ನಾನು ಹೇಳುತ್ತೇನೆ. 'ಪರಿಯತ್ತಿ' ಮುಖ್ಯ ಆದರೆ 'ಪಟಿಪತ್ತಿ' ಮಾತ್ರ ಧರ್ಮದ ನಿಜವಾದ ಫಲಗಳನ್ನು ಕೊಡುತ್ತದೆ. ನೇಪಾಳದ ಇತರೆ ವಿಪಶ್ಯನ ಧ್ಯಾನ ಕೇಂದ್ರಗಳ ಟ್ರಸ್ಟಿಗಳನ್ನು ಮತ್ತು ಧರ್ಮ ಸೇವಕರನ್ನು ಸಹ ಗೋಯಂಕಜಿ ಭೇಟಿ ಮಾಡಿದರು.

ಮಾರನೆಯ ದಿನ ಧ್ಯಾನ ಕೇಂದ್ರಕ್ಕೆ ಮಂಗಳಕರ ದಿನವಾಯಿತು. ಏಕೆಂದರೆ 180ಕ್ಕಿಂತ ಹೆಚ್ಚು ಭಿಕ್ಕುಗಳು ಮತ್ತು ಭಿಕ್ಕುಣಿಯರನ್ನು ಸಂಘದಾನಕ್ಕಾಗಿ ಧ್ಯಾನ ಕೇಂದ್ರಕ್ಕೆ ಆಹ್ವಾನಿಸಲಾಗಿತ್ತು. ಅವರಲ್ಲಿ ಬಹುತೇಕರು ವಿಪಶ್ಯನ ಧ್ಯಾನ ಸಾಧಕರಾಗಿದ್ದರು. ಊಟದ ನಂತರ ಇವರೆಲ್ಲರನ್ನು ಟೆಂಟ್‌ಗೆ ಆಹ್ವಾನಿಸಿ ಗೋಯಂಕಜಿ, ಮಾತಾಜಿ ಮತ್ತು ಧ್ಯಾನ ಸಾಧಕರು ಅವರಿಗೆ ಅವಶ್ಯಕ ವಸ್ತುಗಳನ್ನು ದಾನ ಮಾಡಿದರು. ಸಂಘದಾನ ಮಾಡಿದ ಮಹದಾನಂದದಲ್ಲಿ ಇಡೀ ವಾತಾವರಣ ತುಂಬಿತ್ತು. ಗೃಹತ್ಯಾಗ ಮಾಡಿ ಸಂನ್ಯಾಸ ದೀಕ್ಷೆ ಪಡೆಯುವ ವ್ಯಕ್ತಿಯು ತನ್ನ ಇಡೀ ಜೀವನವನ್ನು ಧರ್ಮಕ್ಕೆ ಮೀಸಲಿಡುವುದರಿಂದ ಗೌರವಕ್ಕೆ ಮತ್ತು ದಾನಕ್ಕೆ ಯೋಗ್ಯರಾಗುತ್ತಾರೆ. ಶತಶತಮಾನಗಳ ಕಾಲ ಧರ್ಮದ ಸಿದ್ಧಾಂತ ಮತ್ತು ಅನುಷ್ಠಾನವನ್ನು ರಕ್ಷಿಸಿದ್ದಕ್ಕಾಗಿ ವಿಪಶ್ಯನ ಧ್ಯಾನ ಸಾಧಕರು ಬೌದ್ಧ ಸಂಘಕ್ಕೆ ಕೃತಜ್ಞತಾ ಭಾವ ಹೊಂದಿರುತ್ತಾರೆ.

ಸಂಘದಾನವನ್ನು ಕರಾರುವಕ್ಕಾಗಿ ಯೋಜಿಸಲಾಗಿತ್ತು ಮತ್ತು ಬಹಳ ಚೆನ್ನಾಗಿ ಸಂಘಟಿಸಲಾಗಿತ್ತು. ಸಂಘದಾನದಲ್ಲಿ ಭಾಗವಹಿಸುವುದಕ್ಕಾಗಿ ಧ್ಯಾನಸಾಧಕರು ಬಹಳ ಮುಂಚಿತವಾಗಿಯೇ ನೋಂದಾಯಿಸಿಕೊಂಡಿದ್ದರು. ಪ್ರತಿಯೊಬ್ಬ ಧ್ಯಾನ ಸಾಧಕನು ದಾನ ಕೊಡಬೇಕಾದ ವಸ್ತು ಮತ್ತು ದಾನ ಸ್ವೀಕರಿಸುವ ಸಂಘದ ಸದಸ್ಯರನ್ನು ಮೊದಲೇ ಗುರುತು ಮಾಡಲಾಗಿತ್ತು. 700ಕ್ಕಿಂತ ಹೆಚ್ಚು ಧ್ಯಾನ ಸಾಧಕರು ತಮ್ಮ ಕೈಯ್ಯಾರೆ ದಾನ ಕೊಟ್ಟರು. ದಾನ ವಿತರಣೆಯಾದ ಮೇಲೆ ಸಂಘವು 'ಪುಣ್ಯಾನುಮೋದನ'ವನ್ನು ಪಠಿಸಿತು (ದಾನಿಯ ಆನಂದದಲ್ಲಿ ಭಾಗಿಯಾಗುವುದು ಮತ್ತು ಧರ್ಮ ಮಾರ್ಗದಲ್ಲಿ ಪ್ರಗತಿ ಸಾಧಿಸಿ ಎಂದು ಆಶೀರ್ವದಿಸುವುದು.).

ಮಾರನೆಯ ದಿನ ಗೋಯಂಕಜಿಯವರು ಹೊರಡುವ ಮೊದಲೇ ಧ್ಯಾನ ಸಾಧಕರು ಮತ್ತು ಧಮ್ಮ ಸೇವಕರು ಧ್ಯಾನ ಕೇಂದ್ರಕ್ಕೆ ಬಂದರು. ಅವರನ್ನು ಸಂಧಿಸಿದ ಮೇಲೆ ಗೋಯಂಕಜಿ ಮತ್ತು ಮಾತಾಜಿಯವರು ವಿಮಾನ ನಿಲ್ದಾಣಕ್ಕೆ ಹೊರಟರು. ಅನೇಕ ಟ್ರಸ್ಟಿಗಳು ಮತ್ತು ಸಹಾಯಕ

ಆಚಾರ್ಯರುಗಳು ವಿಮಾನ ನಿಲ್ದಾಣದ ನಿರ್ಬಂಧಿತ ಪ್ರದೇಶವನ್ನು ಪ್ರವೇಶಿಸಲು ವಿಶೇಷ ಪಾಸುಗಳನ್ನು ಪಡೆದುಕೊಂಡಿದ್ದರು. ಆದ್ದರಿಂದ ವಿಮಾನ ನಿಲ್ದಾಣದ ಗೋಯಂಕಜಿಯವರು ಲೌಂಜ್‌ನಲ್ಲಿ(Lounge) ಕಾಯುತ್ತಿರುವಾಗ ಇವರೆಲ್ಲರೂ ಗೋಯಂಕಜಿಯವರೊಟ್ಟಿಗೆ ಧ್ಯಾನ ಮಾಡಿದರು. ಸ್ವಲ್ಪ ಹೊತ್ತು ಧ್ಯಾನ ಮಾಡಿದ ಮೇಲೆ, ಗೋಯಂಕಜಿಯವರು ಮುಂಬಯಿಯವರು ವಿಮಾನ ಹತ್ತುವ ಮೊದಲು, ಲಭ್ಯವಿದ್ದ ಅಲ್ಪಸಮಯದಲ್ಲಿ ಇವರು ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಂಡರು.

ಅಂತಿಮವಾಗಿ ಗೋಯಂಕಜಿಯವರು ನೇಪಾಳದ ಪವಿತ್ರ ಭೂಮಿಗೆ ಮೈತ್ರಿ ಕೊಟ್ಟರು.

**ಯಹ ತೊ ಧರತೀ ಧರ್ಮ ಕೀ,**
**ಯಹ ಬದ್ಧೋಂಕ ದೇಶ್ ;**
**ಶುದ್ಧ ಧರ್ಮ ಜಾಗೇ ಯಹಾ**
**ಕಟೆ ಸಭೀಕಿ ಕ್ಲೇಶ್.**

**ಇದು ಧರ್ಮ ಭೂಮಿ,**
**ಇದು ಬುದ್ಧರ ನಾಡು;**
**ಪರಿಶುದ್ಧ ಧರ್ಮ ಇಲ್ಲಿ ಪುನಃ ಬರಲಿ,**
**ಎಲ್ಲರ ಮನಸ್ಸಿನ ಅಶುದ್ಧತೆಗಳು ನಾಶವಾಗಲಿ.**

**ಯಹ ತೊ ಧರತೀ ಧರ್ಮ ಕೀ,**
**ಯಹ ಹೈ ಪಾವನ ದೇಶ ;**
**ಶುದ್ಧ ಧರ್ಮ ಜಾಗೇ ಯಹಾ**
**ಪೆಹಲೆ ದೇಶ್ ವಿದೇಶ್.**

**ಇದು ಧರ್ಮ ಭೂಮಿ,**
**ಇದು ಪವಿತ್ರ ಭೂಮಿ ;**
**ಪರಿಶುದ್ಧ ಧರ್ಮವು ಇಲ್ಲಿ ಪುನಃ ಬರಲಿ,**
**ಅದು ಅನೇಕ ದೇಶಗಳಿಗೆ ಹರಡಲಿ.**

### ಗೋಯಂಕಜಿಯವರೊಡನೆ ಪ್ರಶ್ನೋತ್ತರಗಳು

('ಫಾರ್ ದಿ ಬೆನಿಫಿಟ್ ಆಫ್ ಮೆನಿ' ಇಂಗ್ಲಿಷ್ ಪುಸ್ತಕದಿಂದ)

**ಪ್ರಶ್ನೆ :** "ಆತ್ಮವು ಶಾಶ್ವತ" ಎಂದು ಹೇಳಲಾಗಿದೆ. ನಿರ್ವಾಣದ ನಂತರ ಆತ್ಮಕ್ಕೆ ಏನಾಗುತ್ತದೆ? ನಿರ್ವಾಣದ ನಂತರ ಅದು ಅಸ್ತಿತ್ವದಲ್ಲಿಲ್ಲದಿದ್ದರೆ, ಆಗ 'ಆತ್ಮವು ಶಾಶ್ವತ' ಎಂಬ ನಂಬಿಕೆಯು ತಪ್ಪು. ಇದರ ಮೇಲೆ ಸ್ವಲ್ಪ ಬೆಳಕು ಚೆಲ್ಲುವಿರಾ?

**ಗೋಯಂಕಜಿ :** ಆತ್ಮವು ಶಾಶ್ವತ ಎಂದು ನಂಬುವುದು ತತ್ವ ಸಿದ್ಧಾಂತದ ನಂಬಿಕೆಯಾಗುತ್ತದೆ. ವ್ಯಕ್ತಿಯು ಮೊದಲು ಆತ್ಮ ಇದೆ ಎಂಬುದನ್ನು ನಂಬಬೇಕು, ನಂತರ ಅವನು ಅದು ಶಾಶ್ವತ ಎಂದು ನಂಬಬೇಕು. ಈ ಎರಡೂ ನಂಬಿಕೆಗಳು ಒಂದಕ್ಕೊಂದು ಬಲವಾಗಿ ಸಂಬಂಧಿಸಿವೆ. ಆತ್ಮವು ಶಾಶ್ವತವಲ್ಲದಿದ್ದರೆ, ಅದು ನನಗೆ ಉಪಯೋಗವಿಲ್ಲ. ಯಾರೋ ಹೇಳುತ್ತಾರೆ ಆತ್ಮವು ಶಾಶ್ವತ ಎಂದು, ನಾನು ಅದನ್ನು ಸುಮ್ಮನೆ ಸ್ವೀಕರಿಸುತ್ತೇನೆ. ಆತ್ಮ ಎಂದರೆ "ನಾನು" ಎಂದು ನಾನು ಅರ್ಥ ಮಾಡಿಕೊಳ್ಳುತ್ತೇನೆ. "ನೋಡು, ಈ ಪ್ರಪಂಚದಲ್ಲಿ ಎಲ್ಲವೂ ಮರಣಾಧೀನ, ಅಶಾಶ್ವತ; ಆದರೆ ನೀನು ಮಾತ್ರ ಶಾಶ್ವತ, ನೀನು ಯಾವಾಗಲೂ ಇರುತ್ತೀಯ" ಎಂದು ಯಾರಾದರೂ ನನ್ನ ಕಿವಿಯಲ್ಲಿ ಉಸುರಿದರೆ, ಈ ನಂಬಿಕೆಯಿಂದ ನಾನು ಉಬ್ಬಿಹೋಗುತ್ತೇನೆ. "ಅದ್ಭುತ, ನಾನು ಶಾಶ್ವತವಾಗಿ ಇರುತ್ತೇನೆ! ಶರೀರ, ಮನಸ್ಸು ಮತ್ತು ಇಡೀ ಬ್ರಹ್ಮಾಂಡ ಪ್ರತಿಯೊಂದೂ ಅಶಾಶ್ವತ; ಆದರೆ ನಾನು ಇರುತ್ತೇನೆ!"

ಅಜ್ಞಾನದಿಂದಾಗಿ "ನಾನು" ಎಂಬುದಕ್ಕೆ ನಾವು ಬೆಳೆಸಿಕೊಂಡಿರುವ ಬಂಧನವನ್ನು ಈ ರೀತಿಯ ನಂಬಿಕೆಯು ಗಟ್ಟಿಗೊಳಿಸುತ್ತದೆ ! ಈ ಎಲ್ಲಾ ತತ್ವಸಿದ್ಧಾಂತದ ನಂಬಿಕೆಗಳು ರೂಪುಗೊಳ್ಳುವುದರ ಹಿಂದೆ ಒಂದು ಕಾರಣವಿದೆ. ನಮ್ಮ ಕೆಲಸವು "ಇಲ್ಲ, ಅದು ತಪ್ಪು" ಎಂದು ಹೇಳುವುದಲ್ಲ, ಯಾಕೆ ಎಂದು ಕಾರಣಗಳನ್ನು ಕೊಡುವುದಲ್ಲ ಮತ್ತು ವಾದವಿವಾದಗಳಲ್ಲಿ ತೊಡಗುವುದಲ್ಲ. ಅದು ಸಹಾಯ ಮಾಡುವುದಿಲ್ಲ. ನಾವು ಈ ನಂಬಿಕೆಯನ್ನು ಸಮರ್ಥಿಸುವುದೂ ಇಲ್ಲ.

ಅದನ್ನು ಬಿಟ್ಟುಬಿಡಿ. ಸರಿ, ಆತ್ಮ ಇದೆ, ಅದು ಶಾಶ್ವತ ಎಂಬುದು ನಂಬಿಕೆಯಾದರೆ, ನಾನು ಆ ನಂಬಿಕೆಯನ್ನು ಪರೀಕ್ಷಿಸುತ್ತೇನೆ. ವಿಪಶ್ಯನವು ವ್ಯಕ್ತಿಗೆ ಸಂಬಂಧಿಸಿದ ಸತ್ಯವನ್ನು ಶರೀರದ ಚೌಕಟ್ಟಿನೊಳಗೆ ಪರೀಕ್ಷಿಸುವುದಲ್ಲದೆ ಬೇರೇನೂ ಅಲ್ಲ. ನಿಮ್ಮ ಅನುಭವಕ್ಕೆ ಬರುವ ಮೊದಲನೆಯದು ನಿಮ್ಮ ಶರೀರದ ರಚನೆ. ವಿಪಶ್ಯನದಿಂದ ನೀವು ಸ್ಥೂಲದಿಂದ, ಸೂಕ್ಷ್ಮ, ಅತ್ಯಂತ ಸೂಕ್ಷ್ಮಕ್ಕೆ ಚಲಿಸಿದಂತೆ ಉದಯವಾಗಿ ನಾಶವಾಗುವ ಪ್ರತಿಯೊಂದು ಉಪಪರಮಾಣು ಕಣವನ್ನು ಅನುಭವಿಸುವ ಹಂತಕ್ಕೆ ತಲುಪುತ್ತೀರಿ. "ಇದು ಆತ್ಮ ಅಲ್ಲ, ಏಕೆಂದರೆ ಆತ್ಮವು ಶಾಶ್ವತ ಮತ್ತು ಇದು ಶಾಶ್ವತ ಅಲ್ಲ"ಎಂಬುದನ್ನು ಸಕಾರಣವಾಗಿ ಮನಗಾಣುತ್ತೀರಿ.

ಇದೇ ತರಹ, ಇಡೀ ಮನಸ್ಸಿನ ರಚನೆಯನ್ನು ನೀವು ಗಮನಿಸುತ್ತಿರುತ್ತೀರಿ. ಸ್ಥೂಲದಿಂದ ಸೂಕ್ಷ್ಮ, ಸೂಕ್ಷ್ಮದಿಂದ ಅತ್ಯಂತ ಸೂಕ್ಷ್ಮ ಸತ್ಯವನ್ನು ಗಮನಿಸುತ್ತಾ, ಮನಸ್ಸಿನ ರಚನೆಯು ಸಹ ಉದಯವಾಗಿ ವ್ಯಯವಾಗುವ ಸಣ್ಣ ಅಲೆಗಳಲ್ಲದೆ ಬೇರೇನೂ ಅಲ್ಲ ಎಂಬುದನ್ನು ಕಾಣುವ ಹಂತವನ್ನು ನೀವು ತಲುಪುತ್ತೀರಿ. ಈ ಅನುಭವದಿಂದ, ಒಬ್ಬ ವಿಜ್ಞಾನಿಯ ರೀತಿ, ಸತ್ಯ ಏನೆಂಬುದನ್ನು ನೀವು ಪರೀಕ್ಷಿಸುತ್ತೀರಿ. ಇಡೀ ಮನಸ್ಸು ಮತ್ತು ಶರೀರದ ವಿದ್ಯಮಾನವು ಉದಯವಾಗಿ ವ್ಯಯವಾಗುವ ಹಂತವನ್ನು ನೀವು ತಲುಪಿದಾಗ–ಮತ್ತು ಈ ಇಡೀ ಪ್ರಕ್ರಿಯೆಯಲ್ಲಿ ಮನಸ್ಸಿನ ಅಶುದ್ಧತೆಗಳು ಮೂಲೋತ್ಪಾಟನೆಯಾಗುತ್ತವೆ– ಮನಸ್ಸು ಮತ್ತು ಶರೀರದ ಕ್ಷೇತ್ರವನ್ನು ದಾಟುವ ಹಂತ ಬರುತ್ತದೆ ಮತ್ತು ನೀವು 'ನಿಬ್ಬಾಣ' ಎಂದು ಕರೆಯುವುದನ್ನು ಅನುಭವಿಸುತ್ತೀರಿ. ಅಲ್ಲಿ ಯಾವುದೂ ಉದಯವಾಗುವುದಿಲ್ಲ ಮತ್ತು ಯಾವುದೂ ನಾಶವಾಗುವುದಿಲ್ಲ. ಅದು ಶಾಶ್ವತ ಎಂದು ನೀವು ಹೇಳಬಹುದು. ಆದರೆ ನೀವು ಆ ಹಂತವನ್ನು ತಲುಪಿದಾಗ, ಅಲ್ಲಿ "ನಾನು" ಎಂಬುದು ಇರುವುದಿಲ್ಲ. ಈ ಹಂತವನ್ನು ಪ್ರತಿಯೊಬ್ಬ ವ್ಯಕ್ತಿಯೂ ಅನುಭವಿಸಬೇಕು. ಈ ಅನುಭವವಿಲ್ಲದಿದ್ದರೆ, ಮತ್ತೆ ಇದೂ ಒಂದು ತತ್ವಸಿದ್ಧಾಂತವಾಗುತ್ತದೆ.

ಶರೀರ ಕ್ಷೇತ್ರದೊಳಗೇ ನೀವು ಅನುಭವಿಸುವ ಸತ್ಯಕ್ಕೆ ಸಂಬಂಧಿಸಿದ ವಾಸ್ತವತೆಯನ್ನು ಮಾತ್ರ ಒಪ್ಪಿಕೊಂಡು ಮುಂದೆ ಚಲಿಸುತ್ತಿರಿ. ಉತ್ತರವು ದೊರೆಯುತ್ತದೆ, ಈ ಉತ್ತರವನ್ನು ಒದಗಿಸಲು ವಿಪಶ್ಯನವು ಸಹಾಯ ಮಾಡುತ್ತದೆ.

**ಪ್ರಶ್ನೆ :** ಒಂದೇ ಒಂದು ಗ್ಲಾಸ್ ಮದ್ಯ ಸೇವಿಸುವುದೂ ಏಕೆ ಶೀಲ ಭಂಗವಾಗುತ್ತದೆ?

**ಉತ್ತರ :** ಒಂದು ಗ್ಲಾಸ್ ಹೆಚ್ಚು ಗ್ಲಾಸ್‌ಗಳಾಗುತ್ತವೆ. ಆದ್ದರಿಂದ ಪ್ರಾರಂಭದಿಂದಲೇ ಅದರಿಂದ ಏಕೆ ಹೊರಬರಬಾರದು?

ವ್ಯಕ್ತಿಯು ಒಮ್ಮೆ ಚಟಕ್ಕೆ ಒಳಗಾದರೆ, ಅದರಿಂದ ಹೊರಬರುವುದು ಬಹಳ ಕಷ್ಟ ಆದ್ದರಿಂದ ಚಟವಾಗುವ ಯಾವುದೇ ಮಾದಕ ವಸ್ತುವಿನಿಂದ ಏಕೆ ದೂರವಿರಬಾರದು?

ಇನ್ನೊಂದು ಪ್ರಮುಖ ಕಾರಣವೆಂದರೆ, ಎಲ್ಲಾ ಮತ್ತುಬರಿಸುವ ವಸ್ತುಗಳ ಸೇವನೆಯಿಂದ ಹೊರಬಂದು ಧ್ಯಾನದಲ್ಲಿ ಪ್ರಗತಿ ಹೊಂದುತ್ತಿರುವ

**RNI. No. : KARKAN/2015/68727. Postal Regn. No.: RNP/KA/BGS/2253/2020-22**
**Published On 10th & Posted On 20th of Everymonth. Posted At : Bengaluru PSO, B'luru 26. Price(Annual)Rs.30.**

ವ್ಯಕ್ತಿಯು ಬಹಳ ಸಣ್ಣ ಪ್ರಮಾಣದ ಮದ್ಯ ಸೇವಿಸಿದರೂ ಅದು ತಳಮಳ ಮತ್ತು ಅಸಂತೋಷ ಉಂಟುಮಾಡುವುದನ್ನು ಆ ವ್ಯಕ್ತಿಯು ಅನುಭವಿಸುತ್ತಾನೆ. ಅವರು ಅದನ್ನು ಸೇವಿಸುವುದಿಲ್ಲ.

ಇದು ಧರ್ಮಕ್ಕೆ ವಿರುದ್ಧವಾಗಿದೆ, ಮನಶ್ಶುದ್ಧಿಗೆ ವಿರುದ್ಧವಾಗಿದೆ ಎಂಬುದನ್ನು ಧ್ಯಾನದಲ್ಲಿ ಪ್ರಗತಿ ಹೊಂದಿರುವ ಅನೇಕರ ಅನುಭವದಿಂದ ತಿಳಿಯಲಾಗಿದೆ. ಅಜ್ಞಾನವು ಮಲಿನತೆಗಳು ಬೆಳೆಯಲು ಕಾರಣವಾಗುತ್ತದೆ ಮತ್ತು ಮತ್ತುಬರಿಸುವ ವಸ್ತುಗಳು ಅಜ್ಞಾನದ ಜೊತೆ ನಿಕಟ ಸಂಬಂಧ ಹೊಂದಿವೆ. ಅವು ನಿಮ್ಮ ಎಲ್ಲಾ ತಿಳುವಳಿಕೆಯನ್ನು ಮರೆಸಿಬಿಡುತ್ತವೆ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅವುಗಳಿಂದ ಹೊರಬನ್ನಿ.

**ಪ್ರಶ್ನೆ :** ಭಾರತದಲ್ಲಿ ಅನೇಕ ವಿಧದ ಧಾರ್ಮಿಕ ಆಚರಣೆಗಳಿವೆ, ಸಾಮಾಜಿಕ ಪದ್ಧತಿಗಳು ಮತ್ತು ಜಾತಿಗಳಿವೆ. ಇಂತಹ ಪರಿಸ್ಥಿತಿಗಳಲ್ಲಿ ವಿಪಶ್ಯನವು ಹೇಗೆ ಸಹಾಯ ಮಾಡುತ್ತದೆ?

**ಗೋಯಂಕಜಿ :** ಇಂತಹ ಪರಿಸ್ಥಿತಿಯಲ್ಲಿ ವಿಪಶ್ಯನ ಮಾತ್ರ ಸಹಾಯ ಮಾಡಬಲ್ಲದು. ಈ ಎಲ್ಲಾ ಪಂಥಗಳು, ಸಮುದಾಯಗಳ ನಂಬಿಕೆಗಳು, ಮತತತ್ವಗಳು, ಧಾರ್ಮಿಕ ವಿಧಿ ಮತ್ತು ನಿತ್ಯಾಚರಣೆಗಳಲ್ಲಿ ಸಾರ್ವತ್ರಿಕ ವಾದದ್ದು ಒಂದಿದೆ. ಅದೇ ನಿಮ್ಮನ್ನು ಅಥವಾ ಇತರರನ್ನು ಹಾನಿಗೀಡು ಮಾಡದಿರುವಷ್ಟರ ಮಟ್ಟಿಗೆ ಮನಶ್ಶುದ್ಧಿ ಮಾಡುವುದು. ಆದ್ದರಿಂದ ವ್ಯಕ್ತಿಯು ಯಾವುದೇ ಸಮುದಾಯಕ್ಕೆ ಸೇರಿರಲಿ ಅಥವಾ ನಂಬಿಕೆಯನ್ನು ಹೊಂದಿರಲಿ, ಆದರೆ ಪ್ರತಿಯೊಬ್ಬರೂ ಸುಲಭವಾಗಿ ಇದನ್ನು ಸ್ವೀಕರಿಸುತ್ತಾರೆ.

ಒಂದು ಉದಾಹರಣೆ : ದೊಡ್ಡಸಂಖ್ಯೆಯ ಕ್ರೈಸ್ತ ಪಾದ್ರಿಗಳು ಮತ್ತು ಸಂನ್ಯಾಸಿನಿಯರು ಶಿಬಿರಗಳಿಗೆ ಬರುತ್ತಾರೆ. "ನೀವು ಬುದ್ಧರ ಹೆಸರಿನಲ್ಲಿ ಕ್ರೈಸ್ತ ಮತವನ್ನು ಬೋಧಿಸುತ್ತೀರಿ" ಎಂದು ಅವರಲ್ಲಿ ಕೆಲವರು ಹೇಳಿದ್ದಾರೆ. ಮನಶ್ಶುದ್ಧಿಯಾಗುವುದನ್ನು ಪ್ರತಿಯೊಬ್ಬರೂ ಬಯಸುತ್ತಾರೆ. ಅದೇ ರೀತಿ, ಒಬ್ಬ ವ್ಯಕ್ತಿಯು ಜೈನ್ ಅಥವಾ ಹಿಂದೂ ಅಥವಾ ಯಾವುದೇ ಆಗಿರಲಿ, ವಿಪಶ್ಯನ ಧ್ಯಾನ ಮಾಡಲು ಆರಂಭಿಸಿದರೆ, ಅದು ಸಾರ್ವತ್ರಿಕವಾಗಿದೆ ಮತ್ತು ಎಲ್ಲರಿಗೂ ಒಳ್ಳೆಯದು ಎಂಬುದನ್ನು ಕಾಣುತ್ತಾನೆ. ವಿಪಶ್ಯನ ಧ್ಯಾನ ಮಾಡುವ ಜನರಿಗೆ ಈ ಎಲ್ಲಾ ಭಿನ್ನತೆಗಳು ಅಪ್ರಸ್ತುತವಾಗುತ್ತವೆ. ಇದು ದೇಶದಲ್ಲಿ ಒಗ್ಗಟ್ಟನ್ನು, ಮಾನವ ಜನಾಂಗದಲ್ಲಿ ಒಗ್ಗಟ್ಟನ್ನು ತರುತ್ತದೆ. ಇದು ಬಹಳ ಸಕಾರಾತ್ಮಕವಾದ ಕೆಲಸ.

**ಧಮ್ಮ ಪಪುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು** : 2022 : ಜೂನ್ 1–12, 15–26, 29–10 ಜುಲೈ 13–24, 27–7 ಆಗಸ್ಟ್ 10–21, ಸೆಪ್ಟಂಬರ್ 13–24, 28–9 ಅಕ್ಟೋಬರ್ 12–23, 26–6 ನವೆಂಬರ್.

**ವಿಳಾಸ :** ಧಮ್ಮ ಪಪುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್) ನಗರ ಸಾರಿಗೆ ಬಸ್ ಸಂಖ್ಯೆ : 256, 258, 258 ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. **ಇ–ಮೇಲ್ :** info@paphulla. dhamma. org;website; www. vridhamma.org.

**ಧಮ್ಮ ನಗರಿ ವಿಪಶ್ಯನ ಧ್ಯಾನ ಕೇಂದ್ರ ದಾವಣಗೆರೆ.**

**10 ದಿನದ ಶಿಬಿರಗಳು** :–2022 ಮೇ 18–29, ಜೂನ್ 8–19, 29–10 ಜುಲೈ, 13–24, ಆಗಸ್ಟ್ 3–14, 17–28, ಸೆಪ್ಟಂಬರ್ 7–18. ನೋಂದಣಿ ಮಾಡಿಕೊಳ್ಳಲು ಈ ಮುಂದಿನ ಲಿಂಕ್ ಅನ್ನು ಉಪಯೋಗಿಸಿಕೊಳ್ಳಿ :

https://www.dhamma.org/en/schedules/v2/noncenter/davangere.in#normal.

**ನೋಂದಣಿ ಸಹಾಯ ಬೇಕಾದರೆ ಸಂಪರ್ಕಿಸಿ :** ಅಭಿಷೇಕ ರಾಮ್ +91 90087 33008

**ಧಮ್ಮ ನದಿ, ವಿಪಶ್ಯನ ಧ್ಯಾನಕೇಂದ್ರ ಉಡುಪಿ ಜಿಲ್ಲೆ**

ನಿರ್ಮಾಣ ಕೇಂದ್ರ ಆರಂಭವಾಗಿದೆ. ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 1 ರವರೆಗೆ ಧ್ಯಾನ ಕಾರ್ಯಕ್ರಮ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9449773942, 9880173542, 8792173942.

**ಧಮ್ಮ ಸುಖಾಲಯ, ಬೆಂಗಳೂರು.**

ಪ್ರತಿ ಭಾನುವಾರ ಒಂದು ದಿನದ ಶಿಬಿರವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಪ್ರಕಾಶ್‌ಚಂದ್ರ 89898 66927, ಚೆಲುವರಾಜು 9900452939, ಸಂತೋಷ್ ಧರ್ಮರಾಜ್ 8762086089 ನೋಂದಣಿಗೆ : https:/sukhalaya. dhamma.org/en/tapodana.

ದಾರಿ ತೋರಿಸಲು: https://maps.app.goo.gl/EVGKU

**ಧಮ್ಮವನ, ಅಂತರರಾಷ್ಟ್ರೀಯ ವಿಪಶ್ಯನ ಧ್ಯಾನಕೇಂದ್ರ,**
**ನಾಡಪ್ಪನಹಳ್ಳಿ – 571 617, ಮೈಸೂರು ಜಿಲ್ಲೆ.**

ನಿರಂತರಾಗಿ 2 ಮತ್ತು ಮೂರು ದಿನದ ಶಿಬಿರಗಳನ್ನು ಆಯೋಜಿಸ ಲಾಗುತ್ತಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು: www.dhamma.org/schedules/schvana.

ಹೆಚ್ಚಿನ ಮಾಹಿತಿಗೆ : 88805 19658

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ,